
# ಕಥೋಪದೇಶ – ಪಂಚತಂತ್ರದ ಕಥೆಗಳು

## ಎರಡು ಕಂಠಗಳಿರುವ ಭಾರುಂಡಪಕ್ಷಿಯ ಕಥೆ



ಒಂದು ಸರೋವರದಲ್ಲಿ ಒಂದೇ ಹೊಟ್ಟೆಯಿರುವ, ಆದರೆ ಎರಡು ತಲೆಗಳಿರುವ ಭಾರುಂಡ ಎಂಬ ಪಕ್ಷಿ ವಾಸವಾಗಿತ್ತು. ಒಮ್ಮೆ ಅದಕ್ಕೆ ಸಮುದ್ರತೀರದಲ್ಲಿ ತೇಲಿಬಂದ ಒಂದು ಹಣ್ಣು ದೊರಕಿತು. ಅದರ ರುಚಿ ಅಪೂರ್ವವಾಗಿತ್ತು. ಆ ಭಾರುಂಡ ಪಕ್ಷಿಯ ಎರಡೂ ಮುಖಗಳೂ "ಹಣ್ಣು ನನಗೆ ಬೇಕು, ನನಗೆ ಬೇಕು" ಎಂದು ಕಚ್ಚಾಡತೊಡಗಿದ್ದವು. ತಮಗೆ ಎರಡು ಮುಖಗಳು, ಕಂಠಗಳಿದ್ದರೂ ಇರುವುದು ಒಂದೇ ಹೊಟ್ಟೆ ಎಂದು ಅವುಗಳಿಗೆ ಹೊಳೆಯಲಿಲ್ಲ. ಈ ಕಚ್ಚಾಟದ ಮಧ್ಯೆ, ಒಂದು ಮುಖವು ಸರಕ್ಕನೆ ಆ ಹಣ್ಣನ್ನು ಕಸಿದುಕೊಂಡು, ತಿಂದು ಆನಂದಪಟ್ಟಿತು. ಇನ್ನೊಂದು ಮುಖಕ್ಕೆ ಹಣ್ಣು ದೊರೆಯದೇ ಅದಕ್ಕೆ ತುಂಬ ಕೋಪ ಬಂದಿತು.

ಇನ್ನೊಂದು ದಿನ ಒಂದು ಕಹಿ ವಿಷದ ಹಣ್ಣು ಸಿಕ್ಕಿತು. ಆಗ ಹಣ್ಣು ಸಿಗದ ಮುಖ ಹೇಳಿತು, "ಹಿಂದೆ ನೀನು ನನಗೆ ಸಿಹಿ ಹಣ್ಣು ಕೊಡದೆ, ಮೋಸ ಮಾಡಿಬಿಟ್ಟೆ. ಆದ್ದರಿಂದ ಇಂದು ನಾನು ಇದನ್ನು ತಿನ್ನುತ್ತೇನೆ." ಆಗ ಮೊದಲ ಮುಖ ಹೇಳಿತು, "ಛೇ! ಹಾಗೆ ಮಾಡಬೇಡ. ನೀನೇನಾದರೂ ಹಣ್ಣು ತಿಂದರೆ, ಇಬ್ಬರಿಗೂ ಸಾವು ಬರುತ್ತದೆ."

ಆದರೆ ಸಿಹಿ ಹಣ್ಣು ಸಿಗದ ಮುಖವು ಸೇಡಿನಿಂದ ಕುದಿಯುತ್ತಿತ್ತು. ಇನ್ನೊಂದು ಮುಖಕ್ಕೆ ಪಾಠ ಕಲಿಸಲೇಬೇಕೆಂಬ ದುರುದ್ದೇಶದಿಂದ, ಆ ವಿಷದ ಹಣ್ಣನ್ನು ತಿಂದೇ ಬಿಟ್ಟಿತು. ಇದರಿಂದಾಗಿ, ವಿಷ ಏರಿ ಆ ಹಕ್ಕಿ ಪ್ರಾಣ ಕಳೆದುಕೊಂಡಿತು. ಅದಕ್ಕೇ ಹೇಳುವರು,

**ಏಕೋದರಾಃ ಪೃಥಗ್ ಗ್ರೀವಾ ಅನ್ಯೋನ್ಯಫಲಭಕ್ಷಿಣಃ ।**
**ಅಸಂಹತಾ ವಿನಶ್ಯಂತಿ, ಭಾರುಂಡಾ ಇವ ಪಕ್ಷಿಣಃ ॥**

ನಿಶ್ಚಿತವಾದ ದೃಢಬುದ್ಧಿಯಿಲ್ಲದವನು, ಒಂದೇ ಹೊಟ್ಟೆಯುಳ್ಳ, ಎರಡು ಬೇರೆ ಬೇರೆ ಕಂಠಗಳಿರುವ, ವಿವಿಧ ಹಣ್ಣುಗಳನ್ನು ತಿಂದ, ಭಾರುಂಡ ಪಕ್ಷಿಯ ಹಾಗೆ ನಾಶವಾಗುತ್ತಾನೆ. ಆದ್ದರಿಂದ, ನಾವು ಇಬ್ಬಂದಿಯ ಮನಸ್ಸುಳ್ಳವರಾಗದೆ, ಚೆನ್ನಾಗಿ ಆಲೋಚನೆ ಮಾಡಿ, ಒಂದು ನಿರ್ಧಾರಕ್ಕೆ ಬಂದು, ನಿಶ್ಚಿತವಾದ ಬುದ್ಧಿಯನ್ನು ಹೊಂದಬೇಕು.

**ಸಂಸ್ಕೃತಿ ಪರಿಚಯ**
**ಪುರಾಣಗಳು**

ಭಾರತೀಯ ಪರಂಪರೆಯಲ್ಲಿ ೧೮ ಪುರಾಣಗಳು ಮತ್ತು ಅಷ್ಟೇ ಸಂಖ್ಯೆಯ ಉಪಪುರಾಣಗಳನ್ನು ಕಾಣಬಹುದು. ಕಥೆಗಳ ಮೂಲಕ ವೇದವೇದಾಂತಗಳ ಗಹನ ತತ್ತ್ವಗಳನ್ನು ಜನಸಾಮಾನ್ಯರಿಗೆ ತಿಳಿಸಲು ಪುರಾಣಗಳು ಪ್ರಯತ್ನಿಸುತ್ತವೆ. ತತ್ತ್ವಜ್ಞಾನವು ಅಂತಿಮ ಸತ್ಯವನ್ನು ಶೋಧಿಸಲು ಪ್ರಯತ್ನಿಸುತ್ತದೆ. ಅದರ ಸ್ವಲ್ಪ ಭಾಗವನ್ನಾದರೂ ಮನದಟ್ಟು ಮಾಡಿಕೊಡಲು ಪುರಾಣಗಳು ಪ್ರಯತ್ನಿಸುತ್ತವೆ. ಭಾರತೀಯ ಜನಾಂಗದ ಮನಸ್ಸಿನ ಭಾವನೆಯನ್ನು ನಾವು ಪುರಾಣಗಳ ಅಧ್ಯಯನದಿಂದ ಅರ್ಥಮಾಡಿಕೊಳ್ಳಬಹುದು. ಪುರಾಣಗಳಲ್ಲಿ ಕಥೆಗಳ ಜೊತೆಜೊತೆಗೆ ಐತಿಹಾಸಿಕವಾದ ಅನೇಕ ಅಂಶಗಳು ಇರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ವಿಶ್ವಸೃಷ್ಟಿಯ, ದೇವಾನುದೇವತೆಗಳ ಮತ್ತು ವೀರಪುರುಷರ ಬಗ್ಗೆ ಹೇರಳವಾದ ಐತಿಹ್ಯಗಳು ಪುರಾಣಗಳಲ್ಲಿ ದೊರಕುತ್ತವೆ. ಅವುಗಳ ಮೂಲಕ ಭಾರತೀಯರು ತಮ್ಮ ನಂಬುಗೆ, ಆದರ್ಶ ಮತ್ತು ಸಂಪ್ರದಾಯಗಳಿಗೆ ಒಂದು ಅಭಿವ್ಯಕ್ತಿಯನ್ನು ನೀಡಿದ್ದಾರೆ. ಹೀಗೆ ಪುರಾಣಗಳು ಭಾರತೀಯ ಸಂಸ್ಕೃತಿಯ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ದಾಖಲೆಗಳಾಗಿವೆ. ಭಾರತೀಯ ಮನಸ್ಸು ಬೆಳೆದುಬಂದ ಬಗೆಯನ್ನು ಪುರಾಣಗಳ ಅಧ್ಯಯನದಿಂದ ನಾವು ಕಂಡುಕೊಳ್ಳಬಹುದಾಗಿದೆ. ಅವು ಜನಸಾಮಾನ್ಯರ ಧಾರ್ಮಿಕ ಭಾವನೆಗಳನ್ನೂ, ಅವರ ಆಚಾರ ವಿಚಾರಗಳನ್ನೂ ಪ್ರತಿನಿಧಿಸುತ್ತವೆ. ಪ್ರಾಚೀನ ಭಾರತದಲ್ಲಿ ನಡೆದ ಧಾರ್ಮಿಕ ಆಂದೋಳನದ ಚಿತ್ರಣ ನಮಗಿಲ್ಲಿ ದೊರೆಯುತ್ತದೆ.

# ಕಥೋಪದೇಶ

## ತನ್ನಂತೆ ಪರರು



ತಂದೆಯ ಹೆಸರು ಸೋಮಣ್ಣ, ತಾಯಿಯ ಹೆಸರು ಯಶೋದೆ. ಅವರಿಗೆ ಇದ್ದ ಮಗನ ಹೆಸರು ಹರಿಪ್ರಸಾದ. ಅವರು ಬಡವರು. ಗುಡಿಸಿಲಿನಲ್ಲಿ ವಾಸಿಸುತ್ತಿದ್ದರು. ಆದರೆ ಮನೆ ಮಂದಿಯೆಲ್ಲಾ ಉದಾರ ಸ್ವಭಾವದವರಾಗಿದ್ದರು. ಬೇರೊಬ್ಬರ ಕಷ್ಟದಲ್ಲಿ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು.

ಒಂದು ದಿನ ಸೋಮಣ್ಣ ಕಾಯಿಲೆ ಬಂದು ಮಲಗಿದನು. ಯಶೋದೆಯು ಮಗನಿಗೆ ಕಾಡಿಗೆ ಹೋಗಿ, ಸ್ವಲ್ಪ ಬೇವಿನ ಚಕ್ಕೆಯನ್ನು ಕಿತ್ತು ತರುವಂತೆ ಹೇಳಿದಳು. ಮಗನು ಕೊಡಲಿಯನ್ನು ತೆಗೆದುಕೊಂಡು ಹೋಗಿ, ಬೇವಿನ ಮರದ ಚಕ್ಕೆಯನ್ನು ಕಿತ್ತು ತಂದನು. ಯಶೋದೆಯು ಅದರಿಂದ ಔಷಧಿ ಮಾಡಿ ಗಂಡನಿಗೆ ಕೊಟ್ಟಳು. ಸೋಮಣ್ಣನ ಆರೋಗ್ಯ ಸುಧಾರಿಸಿತು.

ಮುಂದೆ ಯಾವುದೋ ಒಂದು ದಿನ ತಾಯಿ ಮಗನ ಬಟ್ಟೆ ರಕ್ತವಾಗಿರುವುದನ್ನು ನೋಡಿದಳು. ಗಾಬರಿಯಿಂದ, "ಮಗೂ, ನಿನ್ನ ಬಿಳಿ ಬಟ್ಟೆ ರಕ್ತದಿಂದ ನೆನೆದು ಹೋಗಿದೆ. ಏನಾಯಿತು ನಿನಗೆ?" ಎಂದು ಕೇಳಿದಳು.

ಹರಿಪ್ರಸಾದ ಅದಕ್ಕೆ ಏನೂ ಹೇಳಲಿಲ್ಲ. ತಾಯಿ ಮತ್ತೆ ಮತ್ತೆ ಕೇಳಿದಾಗ ಹೀಗೆ ಉತ್ತರ ಕೊಟ್ಟನು: "ಅಮ್ಮ, ಆ ದಿನ ನೀನು ಬೇವಿನ ಮರದ ಚಕ್ಕೆಯನ್ನು ತರುವಂತೆ ಹೇಳಿದ್ದೆ. ನಾನು ಆ ಮರವನ್ನು ಹತ್ತಿ ತೊಗಟೆಯನ್ನು ತೆಗೆಯುತ್ತಿದ್ದಾಗ, ನನ್ನ ಮನಸ್ಸಿನಲ್ಲಿ ಒಂದು ವಿಚಾರ ಬಂತು. ನಾನು ತೊಗಟೆಯನ್ನು ಕತ್ತಿಯಿಂದ ತೆಗೆಯುತ್ತಿದ್ದಾಗ, ಆ ಮರಕ್ಕೆ ಎಷ್ಟು ನೋವಾಗಿರಬಹುದು! ಅದಕ್ಕಂತೂ ಮಾತನಾಡಲು ಬರುವುದಿಲ್ಲ. ಅದಕ್ಕೆ ಎಷ್ಟು ನೋವು ಆಗಿರಬಹುದು ಎಂದು ತಿಳಿಯಲು ನಾನು ನನ್ನ ಶರೀರದ ಸ್ವಲ್ಪ ಭಾಗದ ಚರ್ಮವನ್ನು ಕಿತ್ತುಕೊಂಡೆ. ಅದರಿಂದ ಈ ರಕ್ತ ಹರಿಯಿತು. ಹೀಗಾಗಿ ಬಟ್ಟೆಯ ಮೇಲೆ ರಕ್ತದ ಕಲೆ ಬಿದ್ದಿದೆ." ಮಗನ ಮಾತನ್ನು ಕೇಳಿದ ತಾಯಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ತನ್ನ ಮಗನ ದಯಾಗುಣವನ್ನು ಕಂಡು ಅವಳಿಗೆ ಅಭಿಮಾನ ಮತ್ತು ಸಂತೋಷ ಎರಡೂ ಆಯಿತು. ಅವನನ್ನು ಅವಳು ಗಾಢವಾಗಿ ಆಲಂಗಿಸಿಕೊಂಡಳು. ✪

---



## ಛಲದ ಬಲ!

ತೇನ್‌ಸಿಂಗ್ ಬಾಲಕ. ಪರ್ವತಗಳಿಂದ ಸುತ್ತುವರಿದ ಚಿಕ್ಕ ಗ್ರಾಮದಲ್ಲಿ ಅವನು ವಾಸವಾಗಿದ್ದನು. ದಿನಬೆಳಗಾದರೆ ಅವನು ಜಗತ್ತಿನ ಅತ್ಯುನ್ನತ ಶಿಖರವಾದ ಎವರೆಸ್ಟ್ ಪರ್ವತವನ್ನು ನೋಡುತ್ತಿದ್ದನು. ಒಂದು ದಿನ ಅವನು ತನ್ನ ತಾಯಿಯನ್ನು ಕೇಳಿದ, "ಈ ಶಿಖರವನ್ನು ಯಾರಾದರೂ ಹತ್ತಿದ್ದಾರಾ, ಅಮ್ಮ?" ತಾಯಿ ಹೇಳಿದಳು, "ಇಲ್ಲ ಮಗು, ಇದುವರೆಗೆ ಜಗತ್ತಿನಲ್ಲಿ ಯಾರೂ ಅದನ್ನು ಹತ್ತಿಲ್ಲ!" ಅದೇ ದಿನ ತೇನ್‌ಸಿಂಗ್ ಶಿಖರವನ್ನು ಹತ್ತುವ ನಿಶ್ಚಯ ಮಾಡಿದ; ಕುಳಿತರೆ ನಿಂತರೆ ಅದೇ ಕನಸು ಕಂಡ. ಒಂದು ದಿನ ಅವನ ಕನಸು ನನಸಾಯಿತು. ಆತ ಜಗತ್ತಿನ ಅತ್ಯುನ್ನತ ಶಿಖರವನ್ನು ಏರಿದ ಪ್ರಪ್ರಥಮ ವ್ಯಕ್ತಿಯಾದ. ಆತನ ಛಲವೇ ಛಲ! ✪